## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆಃ 35/2024

**ಸಾಕ್ಷಿಯನ್ನು ದಿಃ 03.11.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ದೇವರಾಜು | ಸಿಡಬ್ಲ್ಯೂಃ 7 | ಪಿಡಬ್ಲ್ಯೂಃ 6 |
| ತಂದೆಯ ಹೆಸರು | ಸುಬ್ಬರಂಗ್ಯ | | |
| ವಯಸ್ಸು | 56 ವರ್ಷ | | |
| ಕೆಲಸ | ಚಾಲಕ | | |
| ವಾಸಸ್ಥಳ | NES Colony ಹುಣಸೂರು. | | |

### ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ಚಾಸಾ-1 ರಿಂದ 6 ಗೊತ್ತಿಲ್ಲ. ಚಾಸಾ-8 ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹೇಳಿಕೆ ನೀಡಿದ್ದೇನೆ. ನಿಪಿ-11 ರಲ್ಲಿರುವ ಬೈಕ್ ನನ್ನದು. ದಿಃ 01.05.2023ರಂದು ನಿಪಿ-11ರಲ್ಲಿ ಕಾಣುವ ಬೈಕನ್ನು ಆರೋಪಿಗೆ ಕೊಟ್ಟಿದ್ದೆ. ಆ ದಿನ ರಾತ್ರಿ 9.00 ಗಂಟೆಗೆ ಆರೋಪಿ ನನ್ನ ಮನೆಯ ಹತ್ತಿರ ಬಂದು ಮೈಲಾಂಬೂರಿಗೆ ಹೋಗಲು ಬಸ್ಸು ಇಲ್ಲ. ಬೈಕ್ ಕೊಡಿ ಬೆಳಿಗ್ಗೆ ವಾಪಸ್ಸು ತಂದು ಕೊಡುತ್ತೇನೆ ಎಂದು ಹೇಳಿ ನನ್ನ ಬೈಕನ್ನು ಪಡೆದುಕೊಂಡರು. ನನ್ನ ಬೈಕ್ ಸಂಃ ಕೆ.ಎ-45-ಹೆಚ್-8410 ಆಗಿದೆ. ಅದು ಹಿರೋ ಹೋಂಡಾ ಕಂಪನಿಗೆ ಸೇರಿದೆ. ದಿಃ 28.07.2023ರಂದು ಚಾಸಾ-8ರವರು ನನಗೆ ಕರೆ ಮಾಡಿ ನನ್ನ ಬೈಕನ್ನು ಆರೋಪಿಯು ಮದ್ಯ ಸಾಗಾಣಿಕೆ ಮಾಡಲು ತೆಗೆದುಕೊಂಡು ಹೋಗಿ ಸಿಕ್ಕಿ ಬಿದ್ದಿದ್ದಾರೆ ಎಂದು ವಿಷಯ ತಿಳಿಸಿದರು. ನಾನು ಅಬಕಾರಿ ಕಚೇರಿಗೆ ಹೋದೆ. ಮೇಲೆ ಹೇಳಿದ ಬೈಕ್ ನನಗೆ ಸೇರಿದ್ದು ಎಂದು ಹೇಳಿದೆ. ಪ್ರಕರಣಕ್ಕೂ ನನಗೂ ಯಾವುದೇ ಸಂಬಂಧ ಇಲ್ಲ ಎಂದು ದಿಃ 28.07.2023 ರಂದು ಹೇಳಿಕೆ ಕೊಟ್ಟೆ. ನನ್ನ ಮೇಲೆ ಹೇಳಿದ ವಾಹನವನ್ನು ನ್ಯಾಯಾಲಯದ ಮುಂದಿರುವ ಆರೋಪಿಗೆ ಕೊಟ್ಟಿದ್ದೇನೆ.

**ಸಿ.ಸಿ. ಸಂಖ್ಯೆ 35/2024** 2 **ಫ್ರಾಸಾ–6**

**<u>ಪಾಟೀ ಸವಾಲುಃ</u> ಆರೋಪಿ ಪರ ಶ್ರೀ. BRL ವಕೀಲರಿಂದಃ**

ಆರೋಪಿ ಹಾಜರಿದ್ದು, ಆರೋಪಿ ಪರ ವಕೀಲರು ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.